


# ವಿವಿಧ ಶಿಕ್ಷಣ ಆಯೋಗ ಹಾಗೂ ಶಿಕ್ಷಣ ನೀತಿಗಳಲ್ಲಿ 'ಶಿಕ್ಷಕ'ರ ಕುರಿತ ಆಶಯಗಳು






– **ಡಾ.ಎಚ್.ಬಿ.ಚಂದ್ರಶೇಖರ್,** ಹಿರಿಯ ಸಹಾಯಕ ನಿರ್ದೇಶಕರು. ಡಿ.ಎಸ್.ಇ.ಆರ್.ಟಿ. ಬೆಂಗಳೂರು, ಮೊ: 7349372709,

ದೇಶದ ಶಿಕ್ಷಣ ಕ್ಷೇತ್ರದ ವ್ಯಾಪ್ತಿ ಅಗಾಧವಾದುದು. ಕೇಂದ್ರ ಸರ್ಕಾರದ ಅಧಿಕೃತ ಅಂಕಿ ಅಂಶಗಳಂತೆ 2015–16ನೇ ಸಾಲಿನಲ್ಲಿ ನಮ್ಮ ದೇಶದಲ್ಲಿ 1 ರಿಂದ 12 ನೇ ತರಗತಿಯವರೆಗೆ ಶಿಕ್ಷಣ ನೀಡುತ್ತಿರುವ 15.22 ಲಕ್ಷ ಶಾಲೆಗಳ 26.06 ಕೋಟಿ ವಿದ್ಯಾರ್ಥಿಗಳಿಗೆ 87 ಲಕ್ಷದಷ್ಟು ಶಿಕ್ಷಕರು ಕಲಿಸುತ್ತಿದ್ದಾರೆ. ಉನ್ನತ ಶಿಕ್ಷಣ ನೀಡುತ್ತಿರುವ ಐವತ್ತೊಂದು ಸಾವಿರಕ್ಕೂ ಅಧಿಕ ಕಾಲೇಜುಗಳು ಹಾಗೂ ಸುಮಾರು 900 ರಷ್ಟು ವಿಶ್ವವಿದ್ಯಾಲಯಗಳ 3.42 ಕೋಟಿಗೂ ಅಧಿಕ ವಿದ್ಯಾರ್ಥಿಗಳಿಗೆ ಸುಮಾರು 15 ಲಕ್ಷದಷ್ಟು ಶಿಕ್ಷಕರು ಕಲಿಸುತ್ತಿದ್ದಾರೆ. ಅಂದರೆ ದೇಶದಲ್ಲಿ ಸುಮಾರು ಒಂದು ಕೋಟಿಯಷ್ಟು ಶಿಕ್ಷಕರು 30 ಕೋಟಿಯಷ್ಟು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ಹೊಣೆಯನ್ನು ಹೊತ್ತಿದ್ದಾರೆ. ಜಗತ್ತಿನ ಅನೇಕ ಮುಂದುವರೆದ ರಾಷ್ಟ್ರಗಳ ಜನಸಂಖ್ಯೆಗಿಂತ (ಅಮೇರಿಕಾ 32.96 ಕೋಟಿ, ರಷ್ಯಾ 14,58 ಕೋಟಿ, ಜಪಾನ್ 12.68 ಕೋಟಿ, ಇಂಗ್ಲೆಂಡ್ 6.75 ಕೋಟಿ, ದಕ್ಷಿಣ ಕೊರಿಯಾ 5.12 ಕೋಟಿ) ಮಿಗಿಲಾದ ಪ್ರಮಾಣದಲ್ಲಿ ನಮ್ಮ ವಿದ್ಯಾರ್ಥಿಗಳ ಸಂಖ್ಯೆಯಿದೆ. ಇಷ್ಟೊಂದು ಅಪಾರ ಪ್ರಮಾಣದ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು, ಪ್ರಜ್ಞಾವಂತ ನಾಗರೀಕರಾಗಿ ಹೊರಹೊಮ್ಮಿದಲ್ಲಿ ದೇಶದ ಮಾನವ ಸಂಪನ್ಮೂಲವು ಸಂಪದ್ಭರಿತವಾಗುತ್ತದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರ ಜವಾಬ್ದಾರಿ ಹಿರಿದಾದುದು.

ಶಿಕ್ಷಕರು ಹಾಗೂ ಶಿಕ್ಷಕರು ನಿರ್ವಹಿಸಬೇಕಾದ ಪಾತ್ರಗಳ ಕುರಿತಂತೆ ವಿವಿಧ ಆಯೋಗದ ವರದಿಗಳು ಹಾಗೂ ಶಿಕ್ಷಣ ನೀತಿಗಳಲ್ಲಿರುವ ಆಶಯ ಹಾಗೂ ಶಿಫಾರಸ್ಸುಗಳ ಬಗ್ಗೆ ತಿಳಿದುಕೊಳ್ಳುವುದು ಕುತೂಹಲದ ಸಂಗತಿಯಾಗಿದೆ.

**ವಿಶ್ವವಿದ್ಯಾಲಯ ಶಿಕ್ಷಣ ಆಯೋಗ (1948–49):** ಇದು ದೇಶದ ವಿಶ್ವವಿದ್ಯಾಲಯಗಳ ಶಿಕ್ಷಣದ ಕುರಿತಂತೆ ದೇಶದ ಶ್ರೇಷ್ಠ ಶಿಕ್ಷಕ, ತತ್ವಶಾಸ್ತ್ರಜ್ಞ, ಮಾಜಿ ರಾಷ್ಟ್ರಪತಿ ಡಾ.ಎಸ್.ರಾಧಾಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ರಚಿತವಾದ ಆಯೋಗವಾಗಿದೆ. ಈ ಆಯೋಗದ ವರದಿಯಲ್ಲಿ ಶಿಕ್ಷಕರ ಕುರಿತಂತೆ ಮಹತ್ವದ ಅಂಶಗಳಿದ್ದು, ಅವುಗಳಲ್ಲಿ ಕೆಲವನ್ನು ಗಮನಿಸೋಣ. ಶೈಕ್ಷಣಿಕ ಪ್ರಕ್ರಿಯೆಯ ಯಶಸ್ಸು ಶಿಕ್ಷಕರ ಚಾರಿತ್ರ್ಯ ಮತ್ತು ಸಾಮರ್ಥ್ಯವನ್ನು ಅವಲಂಭಿಸಿದೆ. ವಿದ್ಯಾರ್ಥಿಗಳಲ್ಲಿ ತಾನು ಕಲಿಸುವ ವಿಷಯದ ಬಗ್ಗೆ ಕುತೂಹಲ ಮೂಡಿಸುವುದು ಶಿಕ್ಷಕರ ಜವಾಬ್ದಾರಿಯಾಗಿದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಬರೀ ಅಂಕಿ–ಅಂಶ, ಮಾಹಿತಿಯನ್ನಷ್ಟೇ ತಿಳಿಸುವುದಕ್ಕೆ ಸೀಮಿತವಾಗದೇ ಅವರಲ್ಲಿ ವಿಮರ್ಶಾತ್ಮಕ ಆಲೋಚನೆ, ತಾರ್ಕಿಕ ಚಿಂತನೆ, ಪ್ರಶ್ನಿಸುವ ಮನೋಭಾವವನ್ನು ಉದ್ದೀಪಿಸಬೇಕು. ತನ್ಮೂಲಕ ವಿದ್ಯಾರ್ಥಿಗಳು ಆತುರದ ನಿರ್ಧಾರಗಳಿಗೆ ಬಾರದಂತೆ ಸ್ವತಂತ್ರವಾದ ಗಟ್ಟಿ ನಿರ್ಧಾರಗಳನ್ನು ಹೊಂದಲು ಶಕ್ತರಾಗುವಂತೆ ಮಾಡಬೇಕು. ಶಿಕ್ಷಕರು ತಾನು ಬೋಧಿಸುವ ವಿಷಯದಲ್ಲಿ ಕಾಲಕಾಲಕ್ಕೆ ಉಂಟಾಗುವ ಆಧುನಿಕ ಬೆಳವಣಿಗೆ, ಬದಲಾವಣೆಗಳ ಕುರಿತಂತೆ ಆಳವಾದ ತಿಳುವಳಿಕೆಯನ್ನು ಹೊಂದಬೇಕು. ತಾನು ಬೋಧಿಸುವ ವಿಷಯದ ಕುರಿತಂತೆ ಪ್ರೀತಿ ಹೊಂದಿರಬೇಕು ಹಾಗೂ ತಮ್ಮ ವಿದ್ಯಾರ್ಥಿಗಳನ್ನು ವಿಶ್ವಾಸ, ಆತ್ಮೀಯತೆಗಳಿಂದ ನಡೆಸಿಕೊಳ್ಳಬೇಕು. ತಾನು ಬೋಧಿಸಿದ ವಿಷಯದಲ್ಲಿ ವಿದ್ಯಾರ್ಥಿಗಳು ಯಾವ ರೀತಿಯಲ್ಲಿ ತೇರ್ಗಡೆ ಹೊಂದಿದ್ದಾರೆಂಬುದು ಶಿಕ್ಷಕರ ಯಶಸ್ಸನ್ನು ಪ್ರತಿಬಿಂಬಿಸುವುದಿಲ್ಲ. ಅಷ್ಟೇಕೆ ವಿದ್ಯಾರ್ಥಿಗಳೆಷ್ಟು ಜ್ಞಾನ ಪಡೆದಿದ್ದಾರೆಂಬುದೂ ಸಹ ಶಿಕ್ಷಕರ ಯಶಸ್ಸಿನ ಮಾನದಂಡವಲ್ಲ. ವಿದ್ಯಾರ್ಥಿಗಳು ಭವಿಷ್ಯದಲ್ಲಿ ಹೊಂದುವ ಜೀವನ ಮಟ್ಟ ಹಾಗೂ ಅವರು ಕಟ್ಟಿಕೊಳ್ಳುವ ಚಾರಿತ್ರ್ಯ, ವ್ಯಕ್ತಿತ್ವಗಳು ಶಿಕ್ಷಕರ ಯಶಸ್ಸಿನ ಸೂಚಕಗಳಾಗಿವೆ. ಇದರ ಜೊತೆ ವಿದ್ಯಾರ್ಥಿಗಳಲ್ಲಿ ಮೌಲ್ಯಗಳನ್ನು ಬೆಳೆಸುವುದು ಶಿಕ್ಷಕರ ಪ್ರಮುಖ ಜವಾಬ್ದಾರಿಯಾಗಿದೆ.

**ಮಾಧ್ಯಮಿಕ ಶಿಕ್ಷಣ ಆಯೋಗ (1952–53):** ದೇಶದಲ್ಲಿ ಮಾಧ್ಯಮಿಕ ಶಿಕ್ಷಣದ ಸ್ಥಿತಿಗತಿ ಕುರಿತು ಅಧ್ಯಯನ ಕೈಗೊಂಡು, ಅಗತ್ಯ ಶಿಫಾರಸ್ಸು ಮಾಡಲು ಮದ್ರಾಸ್ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದ ಎ.ಲಕ್ಷಣಸ್ವಾಮಿ ಮೊದಲಿಯಾರ್ ಅವರ ಅಧ್ಯಕ್ಷತೆಯಲ್ಲಿ ಆಯೋಗವನ್ನು ರಚಿಸಲಾಗಿತ್ತು. ಈ ಆಯೋಗದಲ್ಲಿ ನಮ್ಮ ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದ ಜೆ.ಬಿ.ಮಲ್ಲಾರಾಧ್ಯರವರು ಸದಸ್ಯರಾಗಿ ಕೆಲಸ ಮಾಡಿರುತ್ತಾರೆ. ಈ ಆಯೋಗದಲ್ಲಿ ಶಿಕ್ಷಕರ ಕುರಿತಂತೆ ಮಹತ್ವದ ಅಂಶಗಳಿದ್ದು, ಅವುಗಳಲ್ಲಿ ಕೆಲವನ್ನು ಅವಲೋಕಿಸೋಣ. ಒಂದು ಶಾಲೆಯ ಗೌರವ ಹಾಗೂ ಸಮುದಾಯದ ಮೇಲೆ ಆ ಶಾಲೆಯು ಬೀರಬಹುದಾದ ಪ್ರಭಾವವು ಆ ಶಾಲೆಯಲ್ಲಿ ಕಾರ್ಯನಿರ್ವಹಿಸುವ



ಅವರ ಅಧ್ಯಕ್ಷತೆಯಲ್ಲಿ ಇಡೀ ಶಿಕ್ಷಣ ಕ್ಷೇತ್ರದ ಕುರಿತು ಅಧ್ಯಯನ ಕೈಗೊಂಡು ವರದಿ ಮಾಡಲು ಶಿಕ್ಷಣ ಆಯೋಗವನ್ನು ರಚಿಸಲಾಗಿತ್ತು. ಈ ಆಯೋಗದಲ್ಲಿ ನಮ್ಮ ರಾಜ್ಯದ ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಮುಖ್ಯಸ್ಥರಾಗಿದ್ದ ಕುಮಾರಿ.ಎಸ್.ಪನಂಡಿಕರ್‌ರವರು ಸದಸ್ಯರಾಗಿದ್ದರು. ಈ ಆಯೋಗದ ವರದಿಯ ಮೊದಲ ಅಧ್ಯಾಯದ ಮೊದಲ ವಾಕ್ಯ 'ಪ್ರಸ್ತುತ ಭಾರತದ ಭವಿಷ್ಯವು ತನ್ನ ವರ್ಗ ಕೋಣೆಗಳಲ್ಲಿ ನಿರ್ಮಾಣಗೊಳ್ಳುತ್ತಿದೆ' 'The destiny of India is now being shaped in her classrooms' ಎಂಬ ವಾಕ್ಯವು ಎಲ್ಲರಿಗೂ ಚಿರಪರಿಚಿತವಾಗಿದೆ. ಸದರಿ ಆಯೋಗದ ವರದಿಯ ಮೂರನೇ ಅಧ್ಯಾಯ 'ಶಿಕ್ಷಕರ ಸ್ಥಾನಮಾನ' ದಲ್ಲಿ ನಮೂದಿಸಲಾಗಿರುವ ಮೊದಲ ಹೇಳಿಕೆಯು ಮಹತ್ವಪೂರ್ಣವಾಗಿದೆ. 'ಶಿಕ್ಷಣದ ಗುಣಮಟ್ಟ ಹಾಗೂ ಅದು ರಾಷ್ಟ್ರದ ಅಭಿವೃದ್ಧಿಗೆ ನೀಡುವ ಕೊಡುಗೆಯನ್ನು ಪ್ರಭಾವಿಸುವ ಅನೇಕ ಅಂಶಗಳಲ್ಲಿ ಶಿಕ್ಷಕರ ಗುಣಮಟ್ಟ, ಸಾಮರ್ಥ್ಯ ಹಾಗೂ ಚಾರಿತ್ರ್ಯಗಳು ನಿಸ್ಸಂದೇಹವಾಗಿ ಮಹತ್ವಪೂರ್ಣ ಅಂಶಗಳಾಗಿವೆ'. ಬೋಧನಾ ವೃತ್ತಿಗೆ ಅತ್ಯುತ್ತಮ ಗುಣಮಟ್ಟದ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳುವ ಮೂಲಕ ಉತ್ತಮ ಶಿಕ್ಷಕರು ಯಥೇಚ್ಛವಾಗಿ ಲಭ್ಯವಿರುವಂತೆ ಮಾಡುವುದು, ಶಿಕ್ಷಕರಿಗೆ ಅತ್ಯುತ್ತಮ ಗುಣಮಟ್ಟದ ತರಬೇತಿಯನ್ನು ನೀಡುವ ಮೂಲಕ ಅವರನ್ನು ಶಿಕ್ಷಕರ ವೃತ್ತಿಗೆ ಸಜ್ಜುಗೊಳಿಸುವುದು ಮತ್ತು ಅವರು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವಂತೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸುವುದು ಪ್ರಮುಖವಾದ ವಿಷಯವಾಗಿದೆ. ಶಿಕ್ಷಕರ ಸೃಜನಶೀಲತೆ, ನಾವೀನ್ಯತೆ ಹಾಗೂ ಪ್ರಯೋಗಶೀಲತೆಗಳನ್ನು ಪ್ರೋತ್ಸಾಹಿಸಬೇಕು ಹಾಗೂ ಶಿಕ್ಷಕರು ತಮಗೆ ಸೂಕ್ತವೆನಿಸುವಂತಹ ಬೋಧನಾ ಪದ್ಧತಿಗಳನ್ನು ಅನುಸರಿಸಲು ಅಗತ್ಯ ಸ್ವಾತಂತ್ರ್ಯವು ಅವರಿಗಿರಬೇಕೆಂದು ಆಯೋಗವು ಶಿಫಾರಸ್ಸು ಮಾಡುತ್ತದೆ. ಶಿಕ್ಷಕರ ವೃತ್ತಿಪರ ಬೆಳವಣಿಗೆಗೆ ಅನುಕೂಲ ಕಲ್ಪಿಸಲು ಅಗತ್ಯವಾದ ವಿಚಾರ ಸಂಕಿರಣಗಳು, ಬೇಸಿಗೆ ರಜಾ ಕಾಲದ ಸಂಸ್ಥೆಗಳು, ಸಂಶೋಧನೆ ಕೈಗೊಳ್ಳಲು ಹಾಗೂ ಗ್ರಂಥಗಳನ್ನು ಖರೀದಿಸಲು ಅಗತ್ಯ ಅನುದಾನ ನೀಡಿಕೆ, ಇತ್ಯಾದಿ ಅಂಶಗಳನ್ನು ಶಿಫಾರಸ್ಸು ಮಾಡುತ್ತದೆ. ಶಿಕ್ಷಕರ ವೃತ್ತಿಪರ ಸಾಮರ್ಥ್ಯ, ಚಾರಿತ್ರ್ಯ, ಬದ್ಧತೆಗಳು ಶಿಕ್ಷಕರಿಗೆ ಅಗತ್ಯವಾದ ಅಂಶಗಳೆಂಬುದನ್ನು ಆಯೋಗವು ತನ್ನ ವರದಿಯಲ್ಲಿ ಪ್ರಸ್ತಾಪಿಸುತ್ತದೆ. ಶಿಕ್ಷಕರಿಗೆ ವೇತನ ಹೆಚ್ಚಳ ಹಾಗೂ ಮಾಧ್ಯಮಿಕ ಶಾಲಾ ಶಿಕ್ಷಕರು ತಮ್ಮ ಪದವಿ ಹಾಗೂ ಅರ್ಹತೆಯ ಆಧಾರದ ಮೇಲೆ ಉನ್ನತ ಹಂತದಲ್ಲಿ ಅದರಲ್ಲೂ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಕರಾಗಿ ಪದನ್ನೋತಿ ಹೊಂದಲು ಅವಕಾಶಗಳಿರಬೇಕು ಎಂಬ ಅಂಶಗಳನ್ನು ಆಯೋಗವು ಶಿಫಾರಸ್ಸು ಮಾಡಿದೆ.

ಶಿಕ್ಷಕರನ್ನು ಅವಲಂಬಿಸಿರುತ್ತದೆ ಎಂದು ಆಯೋಗ ಅಭಿಪ್ರಾಯಪಟ್ಟಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರ ಸ್ಥಾನಮಾನವನ್ನು ಉತ್ತಮಪಡಿಸಲು ಆಯೋಗವು ಅನೇಕ ಶಿಫಾರಸ್ಸುಗಳನ್ನು ಮಾಡಿದೆ. ಶಿಕ್ಷಕರ ವೇತನ, ನಿವೃತ್ತಿ ವೇತನ ಹೆಚ್ಚಿಸಲು, ನಿವೃತ್ತಿ ವಯಸ್ಸನ್ನು 55 ರಿಂದ 60 ವರ್ಷಕ್ಕೆ ಹೆಚ್ಚಿಸಲು, ಶಿಕ್ಷಕರ ಮಕ್ಕಳಿಗೆ ಶಾಲಾಹಂತದ ಶಿಕ್ಷಣ ಪೂರ್ಣಗೊಳ್ಳುವವರೆಗೆ ಉಚಿತ ಶಿಕ್ಷಣ ನೀಡುವುದು, ಶಿಕ್ಷಕರು ಹೆಚ್ಚಿನ ವೇಳೆ ಶಾಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುವಂತೆ ಶಾಲೆಯ ಹತ್ತಿರ ಶಿಕ್ಷಕರಿಗೆ ವಸತಿ ಗೃಹಗಳನ್ನು ನಿರ್ಮಿಸುವುದು, ಶಿಕ್ಷಕರು ವಿವಿಧೆಡೆ ನಡೆಯುವ ಶೈಕ್ಷಣಿಕ ಸಮಾವೇಶ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಲು ಅನುಮತಿಸುವುದು, ರಜಾದಿನಗಳನ್ನು ಕಳೆಯಲು ಆರೋಗ್ಯ ಶಿಬಿರ ಅಥವಾ ಆರೋಗ್ಯ ರೆಸಾರ್ಟ್‌ಗಳಲ್ಲಿ ಭಾಗವಹಿಸಲು ರೈಲು ಪ್ರಯಾಣದಲ್ಲಿ ರಿಯಾಯಿತಿ ನೀಡುವುದು, ಶಿಕ್ಷಕರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ಒದಗಿಸುವುದು, ಇತ್ಯಾದಿ ಶಿಫಾರಸ್ಸುಗಳನ್ನು ಆಯೋಗವು ಮಾಡಿದೆ. ಶಿಕ್ಷಣ ಇಲಾಖೆಯಲ್ಲಿ ಉನ್ನತ ಹುದ್ದೆಗಳಲ್ಲಿರುವವರು ಶಿಕ್ಷಕರನ್ನು ಗೌರವದಿಂದ ನಡೆಸಿಕೊಳ್ಳಬೇಕು. ಶಿಕ್ಷಣದ ಕುರಿತ ಅನೇಕ ಪ್ರಮುಖ ವಿಷಯಗಳ ಕುರಿತಂತೆ ನಿರ್ಧಾರ ಕೈಗೊಳ್ಳುವ ವೇಳೆ ಶಿಕ್ಷಕರೊಂದಿಗೆ ಸಮಾಲೋಚಿಸಬೇಕು ಮತ್ತು ಆ ಮೂಲಕ ಶಿಕ್ಷಕರು ಅವರ ವೃತ್ತಿಯ ಕುರಿತಾದ ಜವಾಬ್ದಾರಿಯ ಕುರಿತ ಜಾಗೃತಿಯನ್ನು ಸಶಕ್ತಗೊಳಿಸಬೇಕು.

**ಶಿಕ್ಷಣ ಆಯೋಗ (1964-66):** ವಿಶ್ವವಿದ್ಯಾಲಯ ಧನಸಹಾಯ ಆಯೋಗದ (ಯು.ಜಿ.ಸಿ) ಅಧ್ಯಕ್ಷರಾಗಿದ್ದ ಪ್ರೊ.ಡಿ.ಎಸ್.ಕೊಠಾರಿ

ರಾಷ್ಟ್ರೀಯ ಶಿಕ್ಷಣ ನೀತಿ, 1968: ದೇಶದ ಶಿಕ್ಷಣದ ವ್ಯವಸ್ಥೆಯ ಮೇಲೆ 1968ರ ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ 1986ರ ರಾಷ್ಟ್ರೀಯ ಶಿಕ್ಷಣ ನೀತಿಗಳು ಮಹತ್ವದ ಪರಿಣಾಮವನ್ನು ಬೀರಿವೆ. 1968ರ ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣದ ಗುಣಮಟ್ಟವನ್ನು ಪ್ರಭಾವಿಸುವ ಅನೇಕ ಅಂಶಗಳಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾದುದು ಎಂದು ಅಭಿಪ್ರಾಯಪಟ್ಟಿದೆ. ಶಿಕ್ಷಣ ಕ್ಷೇತ್ರದಲ್ಲಿ ಮಾಡಲಾಗುವ ಎಲ್ಲಾ

ಪ್ರಯತ್ನಗಳ ಯಶಸ್ಸು ಶಿಕ್ಷಕರ ವೈಯಕ್ತಿಕ ಗುಣಗಳು ಹಾಗೂ ಚಾರಿತ್ರ್ಯ, ಶೈಕ್ಷಣಿಕ ಅರ್ಹತೆಗಳು ಮತ್ತು ಅವರ ವೃತ್ತಿಪರ ಸಾಮರ್ಥ್ಯಗಳ ಮೇಲೆ ಅವಲಂಬಿತವಾಗುತ್ತದೆ. ಈ ಕಾರಣಗಳಿಂದ ಸಮಾಜದಲ್ಲಿ ಶಿಕ್ಷಕರಿಗೆ ಉತ್ತಮ ಸ್ಥಾನವನ್ನು ನೀಡಬೇಕು. ಶಿಕ್ಷಕರ ವೇತನ ಹಾಗೂ ಇತರೆ ಭತ್ಯೆಗಳು ಅವರ ಅರ್ಹತೆ ಹಾಗೂ ಅವರು ನಿರ್ವಹಿಸುವ ಕರ್ತವ್ಯ, ಜವಾಬ್ದಾರಿಗಳಿಗೆ ತಕ್ಕಂತೆ ಸಮರ್ಪಕವಾಗಿ ಹಾಗೂ ತೃಪ್ತಿಕರವಾಗಿರಬೇಕು. ಶಿಕ್ಷಕರು ಸ್ವತಂತ್ರವಾದ ಅಧ್ಯಯನ ಹಾಗೂ ಸಂಶೋಧನೆಗಳನ್ನು ಕೈಗೊಳ್ಳಲು ಮತ್ತು ಅವುಗಳನ್ನು ಪುಸ್ತಕದ ರೂಪದಲ್ಲಿ ಪ್ರಕಟಿಸಲು ಅವಕಾಶಗಳಿರಬೇಕು. ಮಹತ್ವದ ರಾಷ್ಟ್ರೀಯ, ಅಂತರರಾಷ್ಟ್ರೀಯ ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಮತ್ತು ಬರವಣಿಗೆಯಲ್ಲಿ ದಾಖಲಿಸಲು ಅಗತ್ಯವಾದ ಶೈಕ್ಷಣಿಕ ಸ್ವಾತಂತ್ರ್ಯವನ್ನು ನೀಡಬೇಕು ಎಂದು ನೀತಿಯಲ್ಲಿ ಉಲ್ಲೇಖಿಸಲಾಗಿದೆ.

**ರಾಷ್ಟ್ರೀಯ ಶಿಕ್ಷಣ ನೀತಿ 1986:** ಶಿಕ್ಷಕರ ಸ್ಥಾನವು ಒಂದು ಸಮಾಜದ ಸಾಮಾಜಿಕ ಸಾಂಸ್ಕೃತಿಕ ಗುಣಮಟ್ಟದಲ್ಲಿ ಪ್ರತಿಫಲಿತವಾಗುತ್ತದೆ. ಯಾವುದೇ ಜನರು ಶಿಕ್ಷಕರ ಹಂತಕ್ಕಿಂತ ಮೇಲೇರಲು ಸಾಧ್ಯವಿಲ್ಲ ಎಂದು ಹೇಳಲಾಗುತ್ತದೆ. ಶಿಕ್ಷಕರು ಸೃಜನಶೀಲ, ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವಂತೆ ಅವರನ್ನು ಪ್ರೇರೇಪಿಸಲು ಹಾಗೂ ಹುರಿದುಂಬಿಸಲು ಸರ್ಕಾರ ಹಾಗೂ ಸಮುದಾಯಗಳು ಅನುಕೂಲಕರ ವಾತಾವರಣಗಳನ್ನು ಸೃಷ್ಟಿಸಬೇಕು. ಶಿಕ್ಷಕರು ನಾವೀನ್ಯಯುತ ಚಟುವಟಿಕೆಗಳನ್ನು ಕೈಗೊಳ್ಳಲು ಅಗತ್ಯವಾದ ಸ್ವಾತಂತ್ರ್ಯ ಶಿಕ್ಷಕರಿಗಿರಬೇಕು. ಶಿಕ್ಷಕರ ವೃತ್ತಿನಿಷ್ಠೆ ಹಾಗೂ ಗೌರವವನ್ನು ಉತ್ತಮಪಡಿಸಲು ಹಾಗೂ ಶಿಕ್ಷಕರಲ್ಲಿರಬಹುದಾದ ದುರ್ನಡತೆಗಳನ್ನು ಹತ್ತಿಕ್ಕಲು ಶಿಕ್ಷಕರ ಸಂಘಟನೆಗಳು ಮಹತ್ವದ ಪಾತ್ರವನ್ನು ನಿರ್ವಹಿಸಬೇಕು ಎಂಬ ಅಂಶಗಳನ್ನು ನೀತಿಯು ಪ್ರಸ್ತಾಪಿಸುತ್ತದೆ.

**ಕರಡು ರಾಷ್ಟ್ರೀಯ ಶಿಕ್ಷಣ ನೀತಿ 2019:** ರಾಷ್ಟ್ರೀಯ ಶಿಕ್ಷಣ ನೀತಿ, 1986ರ ತರುವಾಯ 33 ವರ್ಷಗಳ ನಂತರ ವಿಜ್ಞಾನಿ ಡಾ.ಕಸ್ತೂರಿ ರಂಗನ್ ಅವರ ಅಧ್ಯಕ್ಷತೆಯಲ್ಲಿ 2019 ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡು ರಚನೆಯಾಗಿದೆ. ನಮ್ಮ ರಾಜ್ಯದ ಪ್ರೊ.ಎಂ.ಕೆ. ಶ್ರೀಧರ್ ಅವರು ಕರಡು ನೀತಿ ರಚನಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿರುತ್ತಾರೆ. ಈ ನೀತಿಯ 5ನೇ ಅಧ್ಯಾಯವು ಶಿಕ್ಷಕರ ಕುರಿತಾದ ಅಂಶಗಳಿಗೆ ಮೀಸಲಾಗಿದೆ. ಅತ್ಯುನ್ನತ ವಿದ್ಯಾರ್ಹತೆಯನ್ನು ಹೊಂದಿರುವ, ವೃತ್ತಿಪರ ತರಬೇತಿ ಪಡೆದ, ವೃತ್ತಿಯ ಕುರಿತಂತೆ ಉತ್ಕಟೇಚ್ಛೆ ಹೊಂದಿದ, ಪ್ರೇರಿತ ಹಾಗೂ ಸಮರ್ಥ ಶಿಕ್ಷಕರು ಶಾಲಾ ಹಂತದ ಎಲ್ಲಾ ವಿದ್ಯಾರ್ಥಿಗಳಿಗೆ ಬೋಧಿಸುವುದನ್ನು ಖಾತ್ರಿಪಡಿಸಿಕೊಳ್ಳಬೇಕು ಎಂದು ನೀತಿಯಲ್ಲಿ ಪ್ರಸ್ತಾಪಿಸಲಾಗಿದೆ. ಶಿಕ್ಷಕರು ಶೈಕ್ಷಣಿಕ ಪ್ರಕ್ರಿಯೆಯ ಹೃದಯವೆನ್ನಬಹುದು. ತಾನು ಬೋಧಿಸುವ ವಿದ್ಯಾರ್ಥಿಗಳನ್ನು ಅರ್ಥಮಾಡಿಕೊಂಡು, ಸೌಹಾರ್ದದಿಂದ ಬೋಧಿಸಬೇಕು. ಶಿಕ್ಷಕರು ಉತ್ತಮವಾಗಿ ಕಾರ್ಯನಿರ್ವಹಿಸಬೇಕೆಂದಲ್ಲಿ ಅವರನ್ನು ಗೌರವಿಸಬೇಕು ಮತ್ತು ಬೆಂಬಲಿಸಬೇಕು. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸಂತಸದಿಂದ ಇದ್ದಲ್ಲಿ ಬೋಧನೆ ಮತ್ತು ಕಲಿಕೆಗಳು ಅತ್ಯುತ್ತಮವಾಗಿ ಜರುಗುತ್ತದೆ, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ದಿನವಹಿ ಕಾರ್ಯನಿರ್ವಹಿಸುವ ವಾತಾವರಣವು ಸುರಕ್ಷಿತ ಮತ್ತು ಸೌಹಾರ್ದಯುತವಾಗಿರಬೇಕು. ಶಿಕ್ಷಕರಿಗೆ ಬೋಧಕೇತರ ಹೊರೆ ಇಲ್ಲದಂತಿರಬೇಕು. ತಮ್ಮ ವಿದ್ಯಾರ್ಥಿಗಳಿಗೆ ಸೂಕ್ತವೆನಿಸುವ ಬೋಧನಾ ಪದ್ಧತಿಯಲ್ಲಿ ಬೋಧಿಸಲು ಹಾಗೂ ಅಗತ್ಯವಾದ ನಾವೀನ್ಯತೆ, ಹೊಸತನಗಳನ್ನು ತರಲು ಶಿಕ್ಷಕರಿಗೆ ಸ್ವಾಯತ್ತತೆ ಇರಬೇಕು. ಶಿಕ್ಷಕರು ತಮ್ಮ ವಿದ್ಯಾರ್ಹತೆ, ನೈಪುಣ್ಯತೆಗಳ ಆಧಾರದ ಮೇಲೆ ಮುಂಬಡ್ತಿಗಳನ್ನು ನೀಡುವ ಅಂಶಗಳೂ ಸೇರಿದಂತೆ ಅನೇಕ ಮಹತ್ವದ ಶಿಫಾರಸ್ಸುಗಳನ್ನು ಕರಡು ನೀತಿಯಲ್ಲಿ ಮಾಡಲಾಗಿದೆ.

ಮೇಲೆ ಚರ್ಚಿಸಿದ ವಿವಿಧ ಶಿಕ್ಷಣ ಆಯೋಗ ಹಾಗೂ ವರದಿಗಳಲ್ಲಿ ಉಲ್ಲೇಖಿಸಲಾದ ಶಿಕ್ಷಕರ ಕುರಿತ ಶಿಪಾರಸ್ಸುಗಳು ಇಂದಿಗೂ ಪ್ರಸ್ತುತವಾಗಿರುವುದನ್ನು ಗಮನಿಸಬಹುದಾಗಿದೆ. ವಿದ್ಯಾರ್ಥಿಗಳಿಗೆ ವಿದ್ಯೆ ನೀಡುವಲ್ಲಿ, ಅವರ ವ್ಯಕ್ತಿತ್ವ ರೂಪಿಸುವಲ್ಲಿ ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಮಾಜ ಹಾಗೂ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಕರು ತಮ್ಮ ಮಹತ್ವದ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಲು ಸಾಧ್ಯವಾಗುವಂತೆ ನಾವೆಲ್ಲರು ಪ್ರಯತ್ನಶೀಲರಾಗೋಣ.

